M.V.C 16-2021
PW 2

## <u>ಪ್ರಮಾಣವಚನ ಬೋಧಿಸಿದ ದಿನಾಂಕ 02.12.2025</u>

ಸಾಕ್ಷಿದಾರರ ಹೆಸರು ಡಾಃ ಶಮಿಶೀಯಾನಾಜ್
ಗಂಡನ ಹೆಸರು ಮೊಹಮ್ಮದ್ ಅಸಾದ್

ವಯಸ್ಸು 43 ವರ್ಷ

ಉದ್ಯೋಗ ಕೆ ಆರ್ ಪುರಂ, ಸರ್ಕಾರಿ ಆಸ್ಪತ್ರೆ

ವಾಸ ಬೆಂಗಳೂರು

<u>ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ</u>

1. ನಾನು 2017 ರಿಂದ 2023 ವರೆಗೆ ನಾನು, ವೈದ್ಯಾಧಿಕಾರಿ ಆಗಿ ನೆಲಮಂಗಲ ಸರ್ಕಾರಿ ಆಸ್ಪತ್ರೆಯಲ್ಲಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.
2. ದಿನಾಂಕ 13.06.2020 ರಂದು ಬಸವರಾಜು ಅರ್ಜಿದಾರ ಆರ್ ಟಿ ಎ ಹಿನ್ನಲೆಯಲ್ಲಿ ಪ್ರಥಮ ಬಾರಿಗೆ ನಮ್ಮ ಆಸ್ಪತ್ರೆಗೆ ತುರ್ತು ವಿಭಾಗಕ್ಕೆ ಬಂದಿದ್ದು, ಸದರಿಯವರನ್ನು ನಾನು ಪರಿಕ್ಷೀಸಿದ್ದಾಗ ಸದರಿಯವರಿಗೆ ಎಡಗಾಲಿನಲ್ಲಿ ಜೆಜ್ಜಿದ ಗಾಯ ಕಂಡು ಬಂದಿತ್ತು. ಸದರಿಯವರು ಪ್ರಜ್ಞೆವಸ್ಥೆಯಲ್ಲಿದ್ದರು. ಸದರಿಯವರನ್ನು ಹೆಚ್ಚಿನ ಚಿಕಿತ್ಸೆಗೆ ಐಯರ್ ಸೆಂಟರ್ ರೆಫರ್ ಮಾಡಲಾಗಿತ್ತು. ಈ ಎಂ ಎಲ್ ಸಿ ಎಕ್ಸ್‌ಟ್ರಾಕ್ಟ್ ಹಾಜರುಪಡಿಸಿದ್ದು, ಅದನ್ನು ನಿಪಿ-18 ಎಂದು ಗುರುತಿಸಲಾಗಿದೆ.

**<u>ಪಾಟೀ ಸವಾಲು 2ನೇ ಎದುರುದಾರರು ಪರ ವಕೀಲರಿಂದಃ</u>**

3. ನಿಪಿ-18 ನ್ನು ನಾನೇ ಬರೆದಿರುತ್ತೇನೆ. ಸದರಿ ದಾಖಲೆ ಪ್ರಕಾರ ಗಾಯಳು ಆರ್ ಟಿ ಎ ದಿನಾಂಕ 13.06.2020 ರಂದು ಸಂಜೆ 6-45 ಗಂಟೆ ಸಮಯಕ್ಕೆ ಮಾದವಾರ ಕಾರಿನಿಂದ ಡಿಕ್ಕಿ ಆದ ಬಗ್ಗೆ ನಮ್ಮ ಆಸ್ಪತ್ರೆಗೆ ಬಂದಿದ್ದರು. ಸದರಿ ಮಾಹಿತಿ ನನಗೆ ಗಾಯಳು ಕೊಟ್ಟಿರುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)
4ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದೊಡ್ಡಬಳ್ಳಾಪುರ.